**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

# <u>ಸಿ.ಸಿ.ನಂ.*578/2019*</u>

**<u>ದಿನಾಂಕಃ *10* ನೇ ಮಾರ್ಚ *2020*</u>**

**<u>ಪಿರ್ಯಾದಿ</u>** ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

**-ವಿರುದ್ದ-**

**<u>ಆರೋಪಿ/ತರು</u>**ಃ

*1.* ಕೃಷ್ಣನಾಯ್ಕ ಬಿನ್ ಪುಟ್ಟಾನಾಯ್ಕ,
*40* ವರ್ಷ,
*2.* ರವಿನಾಯ್ಕ ಬಿನ್ ರಾಮನಾಯ್ಕ,
*24* ವರ್ಷ, ಕೂಲಿ ಕೆಲಸ,
*3.* ಗಂಗೀಬಾಯಿ ಕೋಂ ರಾಮನಾಯ್ಕ,
*36* ವರ್ಷ, ವ್ಯವಸಾಯ,
ಎಲ್ಲರ ವಾಸ ಸೇವಾಲಾಲ್ ನಗರ,
ಕರಕುಚ್ಚಿ ತಾಂಡ್ಯ ಗ್ರಾಮ,
ಲಕ್ಕವಳ್ಳಿ ಹೋಬಳಿ, ತರೀಕೆರೆ.

**<u>-ಃದೋಷಾರೋಪಣೆಃ-</u>**

ಶ್ರೀ ರಾಮಮೂರ್ತಿ ಎನ್., ಬಿ.ಎ. ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ತರೀಕೆರೆ ಆದ ನಾನು ನಿಮ್ಮ ವಿರುದ್ದ ಮಾಡುವ ದೋಷಾರೋಪಣೆಗಳೇನೆಂದರೆಃ-

ದಿನಾಂಕಃ*25-11-2018* ರಂದು ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನ ಕರಕುಚ್ಚಿಯ ಸೇವಾಲಾಲ್ ಗ್ರಾಮದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.*1* ರವರ ಅಡಿಕೆ ತೋಟಕ್ಕೆ ಅತಿಕ್ರಮಣ ಪ್ರವೇಶ ಮಾಡಿದ್ದು, ಆದಕಾರಣ ನೀವು ಭಾರತೀಯ ದಂಡ ಸಂಹಿತೆ ಕಲಂ *447* ಸಹವಾಚಕ ಕಲಂ *34* ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.*1* ರವರ ಅಡಿಕೆ ತೋಟಕ್ಕೆ ನುಗ್ಗಿ *6000/*-ರೂ. ಬೆಲೆ ಬಾಳುವ *171* ಕೆ.ಜಿ.ತೂಕದ ಹಸಿ ಅಡಿಕೆಯನ್ನು ಕಳ್ಳತನ ಮಾಡಿದ್ದು, ಆದಕಾರಣ ನೀವು ಭಾರತೀಯ ದಂಡ ಸಂಹಿತೆ ಕಲಂ

***379*** ಸಹವಾಚಕ ಕಲಂ ***34*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

***ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿತರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.***

ಸಹಿ/-
(ರಾಮಮೂರ್ತಿ ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.